# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್:ಉಪಲೋಕ್/ಜಿಎಲ್‌ಬಿ-426/2018/ಎಆರ್‌ಇ-5

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿ:29.06.2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: 1) ಶ್ರೀ ನಾಗರಾಜ್, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ಜಿಲ್ಲೆ, ರಾಯಚೂರು, 2) ಶ್ರೀ ವೀರನಗೌಡ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಯಚೂರು ತಾಲ್ಲೂಕು, ರಾಯಚೂರು ಮತ್ತು 3) ಶ್ರೀಮತಿ ಭಾರತಿ ಬಾಯಿ, ಮೇಲ್ವಿಚಾರಕಿ, ಶಿಶು ಅಭಿವೃದ್ಧಿ ಯೋಜನೆ ಕಛೇರಿ, ರಾಯಚೂರು ಇವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ವರ್ತನೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

---

ಗೌರವಾನ್ವಿತ ಉಪಲೋಕಾಯುಕ್ತರು ದಿ: 31.1.2018ರಂದು ರಾಯಚೂರಿಗೆ ಭೇಟಿ ನೀಡಿದ್ದಾಗ ರಾಯಚೂರು ನಗರ ಪ್ರದೇಶದಲ್ಲಿನ ಕೆಲವು ಅಂಗನವಾಡಿ ಕೇಂದ್ರಗಳನ್ನು ಭೇಟಿ ನೀಡಿ ಪರಿಶೀಲಿಸಿದ್ದು, ಆಗ ರಾಯಚೂರು ತಾಲ್ಲೂಕಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀ ವೀರಣ್ಣಗೌಡ, ರಾಯಚೂರಿನ ಶಿಶು ಅಭಿವೃದ್ಧಿ ಯೋಜನೆಯ ಅಂಗನವಾಡಿ ಮೇಲ್ವಿಚಾರಕರಾದ ಶ್ರೀಮತಿ ಭಾರತಿ ಬಾಯಿ ಇವರುಗಳು ಇದ್ದು ಈ ಕೆಳಕಂಡ ಅಂಗನವಾಡಿ ಕೇಂದ್ರಗಳನ್ನು ಪರಿಶೀಲನೆ ಮಾಡಲಾಗಿ ಕೆಳಗೆ ನಮೂದು ಮಾಡಿರುವ ಅಕ್ರಮಗಳನ್ನು ಗೌರವಾನ್ವಿತ ಉಪಲೋಕಾಯುಕ್ತರು ಗಮನಿಸಿ, ಆಕ್ಷೇಪಿಸಿರುತ್ತಾರೆ.

1. **ಮಡ್ಡಿಪೇಟೆ ವಲಯದ ಕಾಳಿದಾಸ ನಗರ – 1ನೇ ಅಂಗನವಾಡಿ ಕೇಂದ್ರ.**

ಈ ಅಂಗನವಾಡಿ ಕೇಂದ್ರದಲ್ಲಿ ಶ್ರೀಮತಿ ಪದ್ಮಾವತಿ ಎನ್ನುವವರು ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದು 21 ಮಕ್ಕಳು ಈ ಅಂಗನವಾಡಿ ಕೇಂದ್ರದಲ್ಲಿದ್ದು, ಈ ಅಂಗನವಾಡಿ ಕೇಂದ್ರವು ಸಮುದಾಯಭವನದಲ್ಲಿ ನಡೆಯುತ್ತಿದೆಯೆಂದು ನಮೂದಿಸಿರುತ್ತಾರೆ.

ಈ ಕಟ್ಟಡವು ಶುಚಿಯಾಗಿರಲಿಲ್ಲವೆಂದು ಇದನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲವೆಂದು ನಮೂದಿಸಿರುತ್ತಾರೆ. ಮಕ್ಕಳ ಹಾಜರಾತಿ ಪುಸ್ತಕ, ಗರ್ಭಿಣಿಯರ ಹಾಜರಾತಿ ಪುಸ್ತಕ, ಗರ್ಭಿಣಿಯರ ಆರೋಗ್ಯ ತಪಾಸಣೆ ಪುಸ್ತಕ ಇವುಗಳನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲವೆಂದು ನಮೂದಿಸಿರುತ್ತಾರೆ.

ಈ ಕಟ್ಟಡದ ಎದುರುಗಡೆ ಇರುವ ಸ್ವಂತ ಕಟ್ಟಡವನ್ನು ಈ ಅಂಗನವಾಡಿ ಕೇಂದ್ರಕ್ಕಾಗಿ ಕಟ್ಟುತ್ತಿದ್ದಾರೆಂದು ಕಾಮಗಾರಿ ಪೂರ್ಣಗೊಂಡ ನಂತರ ಸ್ಥಳಾಂತರಿಸುತ್ತೇವೆಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿರುತ್ತಾರೆಂದು ನಮೂದು ಮಾಡಿರುತ್ತಾರೆ.

2. **ಮಡ್ಡಿಪೇಟೆ ವಲಯದ ಕಾಳಿದಾಸ ನಗರ – 2ನೇ ಅಂಗನವಾಡಿ ಕೇಂದ್ರ.**

ಈ ಅಂಗನವಾಡಿ ಕೇಂದ್ರದಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಎನ್ನುವವರು ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದು ಇಲ್ಲಿ 20 ಮಕ್ಕಳು ಈ ಅಂಗನವಾಡಿ ಕೇಂದ್ರದಲ್ಲಿದ್ದು, ಈ ಅಂಗನವಾಡಿ ಕೇಂದ್ರವು ಚಿಕ್ಕ ಕಟ್ಟಡದಲ್ಲಿದ್ದು ಅಂದರೆ 10 X 8 ಅಡಿ ವಿಸ್ತೀರ್ಣದಲ್ಲಿ ಇದ್ದು, ಇದರಲ್ಲಿ ಗಾಳಿ ಬೆಳಕು ಇರುವುದಿಲ್ಲವೆಂದು ಈ ಕಟ್ಟಡದಲ್ಲಿ ಶುಚಿತ್ವವಿರಲಿಲ್ಲವೆಂದು ನಮೂದಿಸಿರುತ್ತಾರೆ.

ಇದಲ್ಲದೆ, ಅಡುಗೆ ತಯಾರಿಸಲು ಪ್ರತ್ಯೇಕ ಸ್ಥಳವಿಲ್ಲವೆಂದು , ಹಾಗೂ ಇದು ಸಹ ಶುಚಿಯಾಗಿರಲಿಲ್ಲವೆಂದು ನಮೂದಿಸಿರುತ್ತಾರೆ.

ಮಕ್ಕಳ ಹಾಜರಾತಿ ಪುಸ್ತಕ, ಆಹಾರ ದಾಸ್ತಾನು ಮತ್ತು ವಿತರಣೆ ಪುಸ್ತಕ ಇವುಗಳನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲವೆಂದು ನಮೂದಿಸಿರುತ್ತಾರೆ.

3. **ಮಡ್ಡಿಪೇಟೆ ವಲಯದ ಎಲ್.ಬಿ.ಎಸ್. ನಗರ – 10ನೇ ಅಂಗನವಾಡಿ ಕೇಂದ್ರ.**

ಈ ಅಂಗನವಾಡಿ ಕೇಂದ್ರದಲ್ಲಿ ಶ್ರೀಮತಿ ರೆಹನಾಬೇಗಂ ಎನ್ನುವವರು ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದು ಇಲ್ಲಿ 21 ಮಕ್ಕಳು ಈ ಅಂಗನವಾಡಿ ಕೇಂದ್ರದಲ್ಲಿದ್ದು, ಈ ಅಂಗನವಾಡಿ ಕೇಂದ್ರವು ಚಿಕ್ಕ ಕಟ್ಟಡದಲ್ಲಿದ್ದು, ಇದರಲ್ಲಿ ಗಾಳಿ ಬೆಳಕು ಇರುವುದಿಲ್ಲವೆಂದು ಇದು ಶುಚಿಯಾಗಿರಲಿಲ್ಲವೆಂದು ಕೂಡಿರುತ್ತದೆಂದು ಹಾಗೂ ಮಕ್ಕಳಿಗೆ ಸ್ಥಳಾವಕಾಶವಿಲ್ಲವೆಂದು ನಮೂದಿಸಿರುತ್ತಾರೆ. ಕೇಂದ್ರದ ಹೊರಗಡೆ ಇರುವ ಫಲಕವು ಅಪೂರ್ಣವಾಗಿರುತ್ತದೆ.

ಇದಲ್ಲದೆ, ಮಕ್ಕಳ ಹಾಗೂ ಗರ್ಭಿಣಿಯರ ಹಾಜರಾತಿ ಪುಸ್ತಕ, ಆಹಾರ ದಾಸ್ತಾನು ಮತ್ತು ವಿತರಣೆ ಪುಸ್ತಕ ಇವುಗಳನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲವೆಂದು ನಮೂದಿಸಿರುತ್ತಾರೆ.

ಹೊರಗಡೆ 2 ಶೌಚಾಲಯಗಳು ಇದ್ದು ಇದು ಅಂಗನವಾಡಿ ಕೇಂದ್ರಕ್ಕೆ ಲಗತ್ತಾಗಿದ್ದು, ಇದು ಅಶುಚಿತ್ವದಿಂದ ಕೂಡಿರುತ್ತದೆಂದು ನಮೂದಿಸಿರುತ್ತಾರೆ.

(4) **ಮಡ್ಡಿಪೇಟೆ ವಲಯದ ಎಲ್.ಬಿ.ಎಸ್.ನಗರ–7ನೇ ಅಂಗನವಾಡಿ ಕೇಂದ್ರ:–**

ಈ ಅಂಗನವಾಡಿ ಕೇಂದ್ರದಲ್ಲಿ ಶ್ರೀಮತಿ ಶ್ರೀಮತಿ ಅಶ್ರಫ್ ಉನ್ನಿಸಾ ಎನ್ನುವವರು ಅಂಗನವಾಡಿ ಕಾರ್ಯಕರ್ತೆಯಾಗಿ ಕೆಲಸ ಮಾಡುತ್ತಿದ್ದು ಇಲ್ಲಿ 12 ಮಕ್ಕಳು ಈ ಅಂಗನವಾಡಿ ಕೇಂದ್ರದಲ್ಲಿದ್ದು, ಈ ಅಂಗನವಾಡಿ ಕೇಂದ್ರವು ಚಿಕ್ಕದ್ದಾಗಿದ್ದು ಅಶುಚಿತ್ವದಿಂದ ಕೂಡಿರುತ್ತದೆಂದು ಹಾಗೂ ಮಕ್ಕಳಿಗೆ ಸ್ಥಳಾವಕಾಶವಿಲ್ಲವೆಂದು ನಮೂದಿಸಿರುತ್ತಾರೆ.

(5) **ಮಡ್ಡಿಪೇಟೆ ವಲಯದ ಎಲ್.ಬಿ.ಎಸ್.ನಗರ–12ನೇ ಅಂಗನವಾಡಿ ಕೇಂದ್ರ:–**

ಈ ಅಂಗನವಾಡಿ ಕೇಂದ್ರದಲ್ಲಿ ಶ್ರೀಮತಿ ರೇಷ್ಮಾ ಇವರು ಅಂಗನವಾಡಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇಲ್ಲಿ 23 ಮಕ್ಕಳು ಈ ಅಂಗನವಾಡಿ ಕೇಂದ್ರದಲ್ಲಿದ್ದು, ಈ ಅಂಗನವಾಡಿ ಕೇಂದ್ರವು ಚಿಕ್ಕದ್ದಾಗಿದ್ದು ಶುಚಿತ್ವದಿಂದ ಕೂಡಿರುವುದಿಲ್ಲವೆಂದು ಹಾಗೂ ಗಾಳಿ ಬೆಳಕು ಇರುವುದಿಲ್ಲವೆಂದು ನಮೂದಿಸಿರುತ್ತಾರೆ.

(6) **ಮಡ್ಡಿಪೇಟೆ ವಲಯದ ಎಲ್.ಬಿ.ಎಸ್.ನಗರ-8ನೇ ಅಂಗನವಾಡಿ ಕೇಂದ್ರ:-**

ಈ ಅಂಗನವಾಡಿ ಕೇಂದ್ರದಲ್ಲಿ ಶ್ರೀಮತಿ ಸಾದಿಕಾ ಬೇಗಂ ಇವರು ಅಂಗನವಾಡಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದು ಇಲ್ಲಿ 22 ಮಕ್ಕಳು ಈ ಅಂಗನವಾಡಿ ಕೇಂದ್ರದಲ್ಲಿದ್ದು, ಈ ಅಂಗನವಾಡಿ ಕೇಂದ್ರವು ಬಹಳ ಚಿಕ್ಕದ್ದಾಗಿದ್ದು ಶುಚಿತ್ವದಿಂದ ಕೂಡಿರುವುದಿಲ್ಲವೆಂದು, ಗಾಳಿ ಬೆಳಕು ಇರುವುದಿಲ್ಲವೆಂದು ಹಾಗೂ ಸರಿಯಾಗಿ ನಿರ್ವಹಣೆ ಮಾಡಿಲ್ಲವೆಂದು ನಮೂದಿಸಿರುತ್ತಾರೆ.

2) ಈ ಅಂಗನವಾಡಿ ಕೇಂದ್ರಗಳಿಗೆ ಸಂಬಂಧಪಟ್ಟಂತೆ, ಉಪನಿರ್ದೇಶಕರು ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ಜಿಲ್ಲೆ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಯಚೂರು ತಾಲ್ಲೂಕು ಇವರುಗಳು ಕಾಲಕಾಲಕ್ಕೆ ಭೇಟಿ ನೀಡಿ ಮೇಲ್ವಿಚಾರಣೆ ಮಾಡಿರುವುದಿಲ್ಲವೆಂದು ಅಂದರೆ, ಶುಚಿಯಾದ ಆಹಾರವನ್ನು ಗರ್ಭಿಣಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಬಗ್ಗೆ ತಪಾಸಣೆ ಮಾಡಿಲ್ಲವೆಂದು ಹೆಚ್ಚಿನ ಅಂಗನವಾಡಿ ಕೇಂದ್ರಗಳು ಶುಚಿತ್ವದಿಂದ ಕೂಡಿಲ್ಲವೆಂದು ಇದು ಮಕ್ಕಳ ಹಾಗೂ ಗರ್ಭಿಣಿಯರ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತದೆಂದು ಗೌರವಾನ್ವಿತರು ಆಕ್ಷೇಪಿಸಿದ್ದು, ಕೆಳಕಂಡವರುಗಳ ವಿರುದ್ಧ ಸ್ವಯಂ ಪ್ರೇರಿತ ದೂರನ್ನು ದಾಖಲಿಸಿಕೊಂಡು ಕರ್ನಾಟಕ ಲೋಕಾಯುಕ್ತ ಕಾಯಿದೆ, 1987ರ ಕಲಂ 9 ರನ್ವಯ ತನಿಖೆಯನ್ನು ಕೈಗೊಳ್ಳಲಾಗಿರುತ್ತದೆ.

1. ಶ್ರೀ ನಾಗರಾಜ, ಉಪನಿರ್ದೇಶಕರು ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ಜಿಲ್ಲೆ,
2. ಶ್ರೀ ವೀರಣ್ಣಗೌಡ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಯಚೂರು ತಾಲ್ಲೂಕು,
3. ಶ್ರೀಮತಿ ಭಾರತಿಬಾಯಿ, ಅಂಗನವಾಡಿ ಮೇಲ್ವಿಚಾರಕರು, ಮಡ್ಡಿಪೇಟೆ ವಲಯ, ರಾಯಚೂರು.

(ಇನ್ನು ಮುಂದೆ ಇವರನ್ನು **ಕ್ರಮವಾಗಿ 1 ರಿಂದ 3ನೇ** ಎದುರುದಾರರು ಎಂದು ಕರೆಯಲಾಗುತ್ತದೆ).

3) ಇವರುಗಳ ವಿರುದ್ಧ ದೂರು ದಾಖಲಿಸಿಕೊಂಡು ಇವರುಗಳಿಂದ ಆಕ್ಷೇಪಣೆಯನ್ನು ಕರೆಯಲಾಗಿದ್ದು, 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಇವರುಗಳು ಸಲ್ಲಿಸಿರುವ ಆಕ್ಷೇಪಣೆಗಳು ಒಂದೇ ರೀತಿಯಿಂದ ಕೂಡಿರುತ್ತದೆ. ಅವುಗಳು ಈ ಕೆಳಗಿನಂತಿರುತ್ತದೆ:-

| ಆಕ್ಷೇಪಿತ ವಿವರಣೆ | ಅನುಪಾಲನೆ ವರದಿ |
|---|---|
| 1. ಮಡ್ಡಿಪೇಟೆ ವಲಯದ ಕಾಳಿದಾಸ ನಗರ-1ನೇ ಅಂಗನವಾಡಿ ಕೇಂದ್ರ:- ಈ ಕೇಂದ್ರದ ಕಟ್ಟಡವು ಸಮುದಾಯ ಭವನದಲ್ಲಿ ನಡೆಯುತ್ತಿದ್ದು ಈಕಟ್ಟಡವು ಆಶುಚಿತ್ವದಿಂದ ಕೂಡಿರುತ್ತದೆ. ಹಾಗೂ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಪದ್ಮಾವತಿ ಇವರ (1) ಮಕ್ಕಳ ಹಾಜರಿ, (2) ಗರ್ಭಿಣಿ ಹಾಜರಿ ಪುಸ್ತಕ (3) ಗರ್ಭಿಣಿಯರ ಆರೋಗ್ಯ ತಪಾಸಣೆ, ಪುಸ್ತಕಗಳನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರು ತಿಳಿಸಿರುತ್ತಾರೆ. | ಕಾಳಿದಾಸ ನಗರದ ಅಂಗವಾಡಿ ಕೇಂದ್ರ-1ಕ್ಕೆ ಮಾನ್ಯ ಉಪಲೋಕಾಯುಕ್ತರು ಭೇಟಿ ಮಾಡಿದಾಗ ಅಂಗನವಾಡಿ ಕೇಂದ್ರವು ಸಮುದಾಯ ಭವನದಲ್ಲಿ ನಡೆಯುತ್ತಿದ್ದು.<br>ಪ್ರಸ್ತುತ ಸದರಿ ಕೇಂದ್ರವನ್ನು ಈಗಿರುವ ಸಮುದಾಯ ಭವನ ಕಟ್ಟಡದ ಎದುರುಗಡೆ ಕಟ್ಟಲ್ಪಟ್ಟ (ಸರ್ಕಾರಿ) ಇಲಾಖೆಯ ಸ್ವಂತ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು ಈ ಕಟ್ಟಡಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಹೊಸ ಅಂಗನವಾಡಿ ಕಟ್ಟಡದಲ್ಲಿ ಮಕ್ಕಳಿಗೆ ಅನುಕೂಲವಾಗುವ ರೀತಿಯಲ್ಲಿ ಸ್ಥಳಾವಕಾಶ ಇರುತ್ತದೆ. ಹಾಗೂ ಗಾಳಿ ಬೆಳಕು ಇರುತ್ತದೆ ಈ ಕುರಿತು ಹೊಸ ಕಟ್ಟಡದ ಛಾಯಾಚಿತ್ರಗಳನ್ನು ಲಗತ್ತಿಸಿದೆ.<br>ಈ ಕೇಂದ್ರದ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ಪದ್ಮಾವತಿ ಇವರು ಈ ಕೇಂದ್ರದ 1) ಮಕ್ಕಳ ಹಾಜರಿ ಪುಸ್ತಕ ಹಾಗೂ 2) ಗರ್ಭಿಣಿಯರ ಹಾಗೂ ಹೆರಿಗೆ ಪುಸ್ತಕ 3) ಗರ್ಭಿಣಿ/ಬಾಣಂತಿಯರ ಹಾಜರಾತಿ ನಿರ್ವಹಿಸಿರುತ್ತಾರೆ ಆದರೆ ಮಾನ್ಯ ಉಪಲೋಕಾಯುಕ್ತರು ಭೇಟಿ ಮಾಡಿದಾಗ ಅಂಗನವಾಡಿ ಕಾರ್ಯಕರ್ತೆಯು ಮಾಸಿಕ ವರದಿಯನ್ನು |

| | |
|---|---|
| | ತಯಾರಿಸಲು ತನ್ನ ಮನೆಗೆ ಈ ಪುಸ್ತಕಗಳನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿದ್ದಾರೆ. ಸದರಿ ಅಂಗನವಾಡಿ ಕಾರ್ಯಕರ್ತೆ ನಿರ್ವಹಿಸಿದ ಪುಸ್ತಕಗಳ ಪ್ರತಿಗಳನ್ನು ಲಗತ್ತಿಸಿದೆ.<br>ಕೇಂದ್ರದ ಒಳಗೆ ಸುತ್ತಲಿನ ಪರಿಸರ ಸ್ವಚ್ಛತೆಗೆ ಅಗತ್ಯ ಕ್ರಮವಹಿಸಲಾಗಿದೆ. ಪರಿಸರದ ಅಸ್ವಚ್ಛತೆಯಿಂದಾಗಿ ಮಕ್ಕಳ ಆರೋಗ್ಯದ ಮೇಲೆ ತೀವ್ರ ಪರಿಣಾಮ ಉಂಟು ಮಾಡುವುದರ ಹಿನ್ನೆಲೆಯಲ್ಲಿ ಯಾವಾಗಲೂ ಪ್ರತಿ ದಿನ ಸ್ವಚ್ಛತೆಗೆ ಆದ್ಯ ಗಮನಹರಿಸಲು ಸೂಚಿಸಲಾಗಿರುತ್ತದೆ. ಈ ಬಗ್ಗೆ ವಲಯದ ಎಲ್ಲಾ ಕೇಂದ್ರಗಳ ಕಾರ್ಯಕರ್ತೆಯರ ಮಾಸಿಕ ಸಭೆಗಳಲ್ಲಿ ಅಗತ್ಯ ಸೂಚನೆಗಳನ್ನು ನೀಡಲಾಗಿರುತ್ತದೆ. ಮಕ್ಕಳ ಹಾಜರಾತಿ ಮತ್ತು ಗರ್ಭಿಣಿ ಪುಸ್ತಕಗಳನ್ನು ಸರಿಯಾಗಿ ಇಟ್ಟುಕೊಳ್ಳುವಂತೆ ಅಂಗನವಾಡಿ ಕಾರ್ಯಕರ್ತೆಯರಿಗೆ ಸೂಚನೆಯನ್ನು ನೀಡಲು ಹಾಗೂ ಸರಿಯಾಗಿ ಮೇಲ್ವಿಚಾರಣೆ ಮಾಡಲು ಮೇಲ್ವಿಚಾರಕಿಯರಿಗೆ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ. |
| 2. ಮಡ್ಡಿಪೇಟೆ ವಲಯದ ಕಾಳಿದಾಸ ನಗರ-2ನೇ ಅಂಗನವಾಡಿ ಕೇಂದ್ರ:- ಈ ಕೇಂದ್ರದವು ಚಿಕ್ಕದಾದ ಕಟ್ಟಡದಲ್ಲಿ ನಡೆಯುತ್ತಿದ್ದು ಈ ಕಟ್ಟಡವು ಚಿಕ್ಕದಾದ ಕಟ್ಟಡದಲ್ಲಿ ನಡೆಯುತ್ತಿದ್ದು ಈ ಕಟ್ಟಡವು ಅಶುಚಿತ್ವ | ಈ ಕೇಂದ್ರವು 10 X 8 ವಿಸ್ತೀರ್ಣದ ಚಿಕ್ಕ ಕಟ್ಟಡದಲ್ಲಿ ಕೇಂದ್ರ ನಡೆಯುತ್ತಿರುವುದಾಗಿ ಮತ್ತು ಸರಿಯಾದ ಗಾಳಿ ಬೆಳಕಿನ ವ್ಯವಸ್ಥೆ ಇಲ್ಲವೆಂಬ ಆಕ್ಷೇಪಣೆಗೆ ಪಾಲನಾ ವರದಿಯನ್ನು ಸಲ್ಲಿಸುತ್ತಾ ಅಂದು ಮಾನ್ಯ ಉಪಲೋಕಾಯುಕ್ತರು ನೀಡಿದ ಸೂಚನೆಯಂತೆ ವಿಶಾಲವಾದ ಹಾಗೂ ಗಾಳಿ ಬೆಳಕು ವ್ಯವಸ್ಥೆ ಇರುವ |

| | |
|---|---|
| ದಿಂದ ಕೂಡಿರುತ್ತದೆ. ಹಾಗೂ ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ವಿಜಯಲಕ್ಷ್ಮೀ (1) ಮಕ್ಕಳ ಹಾಜರಿ (2) ಆಹಾರ ದಾಸ್ತಾನು ಮತ್ತು ವಿತರಣೆ, ಪುಸ್ತಕಗಳನ್ನು ಸರಿಯಾಗಿ ನಿರ್ವಾಹಣೆ ಮಾಡಿರುವುದಿಲ್ಲವೆಂದು ಮಾನ್ಯ ಉಪಲೋಕಾಯುಕ್ತರು ತಿಳಿಸಿರುತ್ತಾರೆ | ಸ್ವಚ್ಛತೆಯಿಂದ ಕೂಡಿದ ಕಟ್ಟಡಕ್ಕೆ ಸದರಿ ಕೇಂದ್ರವನ್ನು ಹೊಸದಾಗಿ ಬಾಡಿಗೆ ಕಟ್ಟಡಕ್ಕೆ ಸ್ಥಳಾಂತರ ಮಾಡಲಾಗಿದೆ. ಬದಲಾಯಿಸಿದ ಈ ಕಟ್ಟಡದಲ್ಲಿ ಗಾಳಿ ಬೆಳಕು ಉತ್ತಮ ರೀತಿಯಲ್ಲಿ ಇರುತ್ತದೆ ಹಾಗೂ ಅಡುಗೆ ತಯಾರಿಸಲು ಪ್ರತ್ಯೇಕ ಕೋಣೆ ಇರುತ್ತದೆ. ಸ್ಥಳಾಂತರ ಮಾಡಿದ ಹೊಸ ಕಟ್ಟಡದ ಛಾಯಚಿತ್ರಗಳನ್ನು ಲಗತ್ತಿಸಿದೆ.<br>ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಗೆ ಸದರಿ ಅಂಗನವಾಡಿ ಕೇಂದ್ರದ ಕಟ್ಟಡದ ಒಳಗೆ ಮತ್ತು ಹೊರಗೆ ಸ್ವಚ್ಛತೆಯನ್ನು ಕಾಪಾಡಿಕೊಂಡು ಹೋಗಲು ತಿಳಿಸಲಾಗಿದೆ.<br>ಶ್ರೀಮತಿ ವಿಜಯಲಕ್ಷ್ಮೀ ಅಂಗನವಾಡಿ ಕಾರ್ಯಕರ್ತೆ ಇವರು ಈ ಕೇಂದ್ರದ (1) ಮಕ್ಕಳ ಹಾಜರಾತಿ ಪುಸ್ತಕವು ಮತ್ತು (2) ಆಹಾರ ದಾಸ್ತಾನು ಪುಸ್ತಕವನ್ನು ನಿರ್ವಹಿಸಿರುತ್ತಾರೆ. ಈ ಕೇಂದ್ರಕ್ಕೆ ಮಾನ್ಯ ಉಪಲೋಕಾಯುಕ್ತರು ಭೇಟಿ ಮಾಡಿದಾಗ ಶ್ರೀಮತಿ ವಿಜಯಲಕ್ಷ್ಮೀ ಕಾರ್ಯಕರ್ತೆಯು ಮಕ್ಕಳಿಗೆ ಪಲ್ಸ್ ಪೋಲಿಯೋ ಹಾಕಲು ಮನೆ ಮನೆಗಳಿಗೆ ಹೋಗಿದ್ದರು ಮಾನ್ಯ ಉಪಲೋಕಾಯುಕ್ತರ ಆಕಸ್ಮಿಕ ಭೇಟಿಯಿಂದಾಗಿ ಗಾಬರಿಯಾದ ಶ್ರೀಮತಿ ವಿಜಯಲಕ್ಷ್ಮೀ ಅಂಗನವಾಡಿ ಕಾರ್ಯಕರ್ತೆಯು ತಾನು ನಿರ್ವಹಿಸಿದ ದಾಖಲೆಗಳನ್ನು ಸರಿಯಾಗಿ ತೋರಿಸಿರುವುದಿಲ್ಲ.<br>ಈ ಕೇಂದ್ರದಲ್ಲಿ ನಿರ್ವಹಿಸಿದ ಮಕ್ಕಳ ಹಾಜರಿ ಪುಸ್ತಕ ಹಾಗೂ ಆಹಾರ ದಾಸ್ತಾನು ಪುಸ್ತಕಗಳ ಪ್ರತಿಗಳನ್ನು ತಮ್ಮ ದಯಾಪರ ಮಾಹಿತಿಗಾಗಿ |

| | |
|---|---|
| | ಲಗತ್ತಿಸಿದೆ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ರಾಯಚೂರು ಇವರಿಗೆ ಇನ್ನು ಮುಂದೆ ಎಲ್ಲಾ ಅಂಗನವಾಡಿ ಕೇಂದ್ರಗಳಲ್ಲಿ ದಾಖಲೆಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುವಲ್ಲಿ ಸೂಕ್ತ ಮಾರ್ಗದರ್ಶನ ನೀಡಲು ಸೂಚಿಸಲಾಗಿದೆ. |
| 3. ಮಡ್ಡಿಪೇಟೆ ವಲಯದ ಎಲ್.ಬಿ.ಎಸ್.ನಗರ-10ನೇ ಅಂಗನವಾಡಿ ಕೇಂದ್ರ:- ಈ ಕೇಂದ್ರವು ಚಿಕ್ಕದಾದ ಕಟ್ಟಡದಲ್ಲಿ ನಡೆಯುತ್ತಿದ್ದು ಈ ಕಟ್ಟಡದಲ್ಲಿ ಗಾಳಿ ವ್ಯವಸ್ಥೆ ಇರುವುದಿಲ್ಲ. ಈ ಕಟ್ಟಡವು ಅಶುಚಿತ್ವದಿಂದ ಕೂಡಿರುತ್ತದೆ. ಹಾಗೂ ಕೇಂದ್ರದ ನಾಮಫಲಕವು ಅಪೂರ್ಣ ಇರುತ್ತದೆ. ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ರೆಹನಾ ಬೇಗಂ (1) ಮಕ್ಕಳ ಹಾಜರಿ, (2) ಆಹಾರ ದಾಸ್ತಾನು ಮತ್ತು ವಿತರಣೆ, ಪುಸ್ತಕಗಳನ್ನು ಸರಿಯಾಗಿ ನಿರ್ವಹಣೆ ಮಾಡಿರುವುದಿಲ್ಲವೆಂದು ಮಾನ್ಯಉಪಲೋಕಾಯುಕ್ತರು ತಿಳಿಸಿರುತ್ತಾರೆ. | ಮಾನ್ಯ ಉಪಲೋಕಾಯುಕ್ತರು ಸದರಿ ಕೇಂದ್ರವು ಚಿಕ್ಕದಾಗಿದ್ದು ಗಾಳಿ ವ್ಯವಸ್ಥೆ ಸರಿಯಾಗಿ ಇಲ್ಲವೆಂದು ಮಕ್ಕಳು ಕುಳಿತುಕೊಳ್ಳಲು ಸ್ಥಳಾವಕಾಶ ಇರುವ ಕಟ್ಟಡಕ್ಕೆ ಸದರಿ ಕೇಂದ್ರವನ್ನು ಸ್ಥಳಾಂತರ ಮಾಡಲು ಮಾನ್ಯ ಉಪಲೋಕಾಯುಕ್ತರು ತಿಳಿಸಿರುವುದರಿಂದ ಸದರಿ ಕಟ್ಟಡವನ್ನು ಬಿಟ್ಟು ಬೇರೊಂದು ಕಟ್ಟಡಕ್ಕೆ ಅಂಗನವಾಡಿ ಕೇಂದ್ರವನ್ನು ಸ್ಥಳಾಂತರ ಮಾಡಲಾಗಿದೆ. ಸದರಿ ಹೊಸ ಕೇಂದ್ರದ ಛಾಯಾಚಿತ್ರವನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.<br>ಕೇಂದ್ರದ ನಾಮ ಫಲಕವು ಹಳೆಯದಾಗಿರುತ್ತದೆ ಹಾಗೂ ಬಿಸಿಲಿನ ಪರಿಣಾಮದಿಂದ ಸ್ಪಷ್ಟವಾಗಿ ಕಂಡಿರುವುದಿಲ್ಲ. ಪ್ರಸ್ತುತ ಈ ಕೇಂದ್ರದ ನಾಮ ಫಲಕದಲ್ಲಿ ವಿವರಗಳನ್ನು ಸರಿಪಡಿಸಿ ಕೇಂದ್ರದ ಹೊರಗೆ ತೂಗು ಹಾಕಲಾಗಿದೆ. ಈ ಕುರಿತು ಛಾಯಾಚಿತ್ತವನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.<br>ಶ್ರೀಮತಿ ರೆಹನಾ ಬೇಗಂ ಅಂಗನವಾಡಿ ಕಾರ್ಯಕರ್ತೆ ಇವರು (1) ಮಕ್ಕಳ ಹಾಜರಾತಿ ಪುಸ್ತಕ (2) ಗರ್ಭಿಣಿಯರ ವಿವರ ಪುಸ್ತಕ ಹಾಗೂ (3) ಆಹಾರ ದಾಸ್ತಾನು ಮತ್ತು ವಿತರಣ |

| | |
|---|---|
| | ಪುಸ್ತಕಗಳನ್ನು ನಿರ್ವಹಿಸಿರುತ್ತಾರೆ. ಮತ್ತು ಮಾನ್ಯ ಉಪಲೋಕಾಯುಕ್ತರ ಭೇಟಿ ಸಂದರ್ಭದಲ್ಲಿ ಸದರಿ ದಾಖಲೆಗಳನ್ನು ತೋರಿಸಿರುತ್ತೇನೆಂದು ತಿಳಿಸಿರುತ್ತಾರೆ. ಆದರೆ ಉತ್ತಮ ರೀತಿಯಲ್ಲಿ ಪುಸ್ತಕಗಳನ್ನು ಬರೆಯಲು ಈ ಕೇಂದ್ರದ ಕಾರ್ಯಕರ್ತೆಗೆ ತಿಳಿಸಲಾಗಿದೆ. ಅದೇ ರೀತಿಯಾಗಿ ಅಂಗನವಾಡಿ ಕಾರ್ಯಕರ್ತೆ ಬರೆದಿರುತ್ತಾರೆ ಸದರಿ ಪುಸ್ತಕಗಳ ಪ್ರತಿಗಳನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ. |
| 4. ಮಡ್ಡಿಪೇಟೆ ವಲಯದ ಎಲ್.ಬಿ.ಎಸ್. ನಗರ -7ನೇ ಅಂಗನವಾಡಿ ಕೇಂದ್ರ:- ಈ ಕೇಂದ್ರದಲ್ಲಿ ಶ್ರೀಮತಿ ಅಶ್ರಫ್ ಉನ್ನಿಸಾ ಇವರು ಅಂಗವಾಡಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಾಹಿಸಿದ್ದಾರೆ ಅಂಗನವಾಡಿ ಕಟ್ಟಡವು ಚಿಕ್ಕದಾಗಿದೆ ಎಂದು ಮಾನ್ಯ ಉಪಲೋಕಾಯುಕ್ತರು ತಿಳಿಸಿದ್ದಾರೆ. | ಮಡ್ಡಿಪೇಟೆ ವಲಯದ ಎಲ್.ಬಿ.ಎಸ್.ನಗರ-7ನೇ ಕೇಂದ್ರವು ಚಿಕ್ಕದಾಗಿರುತ್ತದೆ ಇದನ್ನು ಬದಲಾಯಿಸಲು ಮಾನ್ಯ ಉಪಲೋಕಾಯುಕ್ತರು ತಿಳಿಸಿರುತ್ತಾರೆ. ಈ ಕುರಿತು ವಿಶಾಲವಾದ ಕಟ್ಟಡ ಬಾಡಿಗೆ ಪಡೆಯಲು ಈ ಪ್ರದೇಶದಲ್ಲಿ (ಎಲ್.ಬಿ.ಎಸ್.ನಗರದಲ್ಲಿ) ಅಂಗನವಾಡಿ ಕಾರ್ಯಕರ್ತೆ ಹಾಗೂ ವಲಯದ ಮೇಲ್ವಿಚಾರಕಿಯರು ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಯತ್ನ ಮಾಡಿರುತ್ತಾರೆ. ಆದರೆ ಈ ಅಂಗನವಾಡಿ ಕೇಂದ್ರದ ವ್ಯಾಪ್ತಿಯ ಪ್ರದೇಶದಲ್ಲಿ ಸೂಕ್ತ ಕಟ್ಟಡ ಸಿಕ್ಕಿರುವುದಿಲ್ಲವೆಂದು ಶಿಶು ಅಭಿವೃದ್ಧಿ ಯೋಜನಾಧೀಕಾರಿಗಳು ತಿಳಿಸಿರುತ್ತಾರೆ. ಈ ಕುರಿತು ವಾರ್ಡಿನ ನಗರಸಭೆ ಸದಸ್ಯರೊಂದಿಗೆ ಚರ್ಚಿಸಿ ಹಾಗೂ ಸರ್ಕಾರಿ ಶಾಲೆಯಲ್ಲಿ ಸ್ಥಳಾವಕಾಶಕ್ಕೆ ಕೋರಲು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಿಗೆ ಸೂಚಿಸಲಾಗಿದೆ ಮತ್ತು ತಕ್ಷಣವೇ ಕೇಂದ್ರವನ್ನು ಸೂಕ್ತ |

| | |
|---|---|
| | ಕಟ್ಟಡದಲ್ಲಿ ಸ್ಥಳಾಂತರಿಸಲು ಸೂಚಿಸಿದೆ. |
| 5. ಮಡ್ಡಿಪೇಟೆ ವಲಯದ ಎಲ್.ಬಿ.ಎಸ್.ನಗರ-12ನೇ ಅಂಗನವಾಡಿ ಕೇಂದ್ರ:- ಈ ಕೇಂದ್ರದಲ್ಲಿ ಶ್ರೀಮತಿ ರೇಷ್ಮಾ ಇವರು ಅಂಗನವಾಡಿ ಕಾರ್ಯಕರ್ತೆಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಅಂಗನವಾಡಿ ಕಟ್ಟಡವು ಚಿಕ್ಕದಾಗಿದೆ ಹಾಗೂ ಸ್ವಚ್ಛತೆಯಿಂದ ಕೂಡಿರುವುದಿಲ್ಲ ವೆಂದು ಮಾನ್ಯ ಲೋಕಾಯುಕ್ತರು ತಿಳಿಸಿದ್ದಾರೆ. | ಎ.ಬಿ.ಎಸ್. ನಗರ-12ನೇ ಕೇಂದ್ರಕ್ಕೆ ಮಾನ್ಯ ಉಪಲೋಕಾಯುಕ್ತರು ಭೇಟಿ ನೀಡಿ ಸದರಿ ಕೇಂದ್ರವು ಚಿಕ್ಕದಾಗಿದ್ದು, ಗಾಳಿ ವ್ಯವಸ್ಥೆ ಸರಿಯಾಗಿ ಇಲ್ಲವೆಂದು ಮಕ್ಕಳು ಕುಳಿತುಕೊಳ್ಳಲು ಸ್ಥಳಾವಕಾಶ ಇರುವ ಕಟ್ಟಡಕ್ಕೆ ಕೇಂದ್ರವನ್ನು ಸ್ಥಳಾಂತರ ಮಾಡಲು ತಿಳಿಸಿರುವುದರಿಂದ ಸದರಿ ಕಟ್ಟಡವನ್ನು ಬದಲಾಯಿಸಲಾಗಿದೆ ಹಾಗೂ ಮಕ್ಕಳಿಗೆ ಅನುಕೂಲ ವಾಗುವಂತಹ ಕಟ್ಟಡಕ್ಕೆ ಅಂಗನವಾಡಿ ಕೇಂದ್ರವನ್ನು ಸ್ಥಳಾಂತರ ಮಾಡಲಾಗಿದೆ. ಸದರಿ ಹೊಸ ಕೇಂದ್ರದ ಛಾಯಚಿತ್ರವನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ. |
| 6. ಮಡ್ಡಿಪೇಟೆ ವಲಯದ ಎಲ್.ಬಿ. ಎಸ್.ನಗರ-8ನೇ ಅಂಗನ ವಾಡಿ ಕೇಂದ್ರ:- ಈ ಕೇಂದ್ರದಲ್ಲಿ ಶ್ರೀಮತಿ ಸಾದಿಕಾ ಬೇಗಂ ಇವರು ಅಂಗನವಾಡಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಅಂಗನವಾಡಿ ಕಟ್ಟಡವು ಚಿಕ್ಕದಾಗಿದೆ ಹಾಗೂ ಗಾಳಿ ಬೆಳಕಿನ ವ್ಯವಸ್ಥೆ ಹಾಗೂ ಸ್ವಚ್ಛತೆಯಿಂದ ಕೂಡಿರು ವುದಿಲ್ಲವೆಂದು ಮಾನ್ಯ ಲೋಕಾಯುಕ್ತರು ತಿಳಿಸಿದ್ದಾರೆ. | ಮಾನ್ಯ ಉಪಲೋಕಾಯುಕ್ತರು ಸದರಿ ಕೇಂದ್ರವು ಚಿಕ್ಕದಾಗಿದ್ದು, ಗಾಳಿ ಬೆಳಕಿನ ವ್ಯವಸ್ಥೆ ಸರಿಯಾಗಿ ಇಲ್ಲವೆಂದು ಹಾಗೂ ಸುತ್ತಮುತ್ತಲಿನ ಪರಿಸರ ಸ್ವಚ್ಛತೆಯಿಂದ ಕೂಡಿರುವುದಿಲ್ಲ ಮತ್ತು ಮಕ್ಕಳು ಕುಳಿತುಕೊಳ್ಳಲು ಸ್ಥಳಾವಕಾಶ ಇರುವ ಕಟ್ಟಡಕ್ಕೆ ಸದರಿ ಕೇಂದ್ರವನ್ನು ಸ್ಥಳಾಂತರ ಮಾಡಲು ಮಾನ್ಯ ಉಪಲೋಕಾಯುಕ್ತರು ತಿಳಿಸಿರುವುದ ರಿಂದ ಸದರಿ ಅಂಗನವಾಡಿ ಕೇಂದ್ರ ಕಟ್ಟಡವನ್ನು ಬದಲಾಯಿಸಲಾಗಿದೆ ಹಾಗೂ ಮಕ್ಕಳಿಗೆ ಅನುಕೂಲವಾಗುವ ಕಟ್ಟಡವನ್ನು ಬಾಡಿಗೆಗೆ ಪಡೆದು ಅಂಗನವಾಡಿ ಕೇಂದ್ರವನ್ನು ನಡೆಸಲಾಗುತ್ತಿದೆ. ಹೊಸದಾಗಿ ಬಾಡಿಗೆ ಪಡೆದ ಅಂಗನವಾಡಿ ಕೇಂದ್ರದ ಛಾಯಾಚಿತ್ರವನ್ನು ತಮ್ಮ ದಯಾಪರ ಮಾಹಿತಿಗಾಗಿ ಸಲ್ಲಿಸಲಾಗಿದೆ. |

4) ಎದುರುದಾರರು ಮುಂದುವರೆದು ಹೇಳುತ್ತಾ, ಎಲ್ಲಾ ಕೇಂದ್ರಗಳ ಅಂಗನವಾಡಿ ಕಾರ್ಯಕರ್ತೆಯರಿಗೆ ಅಂಗನವಾಡಿ ಕೇಂದ್ರಗಳ ಸ್ವಚ್ಛತೆ ಹಾಗೂ ಸುತ್ತಲಿನ ಪರಿಸರದ ಸ್ವಚ್ಛತೆಗೆ ಗಮನ ಹರಿಸಲು ಮಕ್ಕಳ ಹಾಗೂ ಗರ್ಭಿಣಿಯರ ಹಾಜರಾತಿ ಪುಸ್ತಕ ಅಂಗನವಾಡಿ ಕೇಂದ್ರಗಳಲ್ಲೇ ಇಡಲು ತಿಳಿಸಲಾಗಿರುತ್ತದೆಂದು ನಮೂದಿಸಿರುತ್ತಾರೆ ಹಾಗೂ ಇವುಗಳನ್ನು ಸರಿಯಾಗಿ ಬರೆಯಲು ತಿಳಿಸಿದ್ದು, ಶುಚಿತ್ವವನ್ನು ಕಾಪಾಡಿಕೊಳ್ಳುವಂತೆ ಮತ್ತು ಆಹಾರ ತಯಾರಿಸುವ ಪಾತ್ರೆಗಳು, ಕುಡಿಯುವ ನೀರು ಇವೆಲ್ಲವು ಶುದ್ಧವಾಗಿರುವಂತೆ ನೋಡಿಕೊಳ್ಳಲು ಸೂಚಿಸಲಾಗಿರುತ್ತದೆಂದು ನಮೂದಿಸಿರುತ್ತಾರೆ.

5) ಇವರುಗಳು ಮುಂದುವರೆದು ಹೇಳುತ್ತಾ, ಎಲ್.ಬಿ.ಎಸ್.ನಗರವು ರಾಯಚೂರಿನ ಕೊಳಚೆ ಪ್ರದೇಶಗಳಲ್ಲಿ ಒಂದಾಗಿರುತ್ತದೆಂದು, ಇಲ್ಲಿ ಮನೆಗಳು ಚಿಕ್ಕದಾಗಿದ್ದು, ಸೂಕ್ತ ಕಟ್ಟಡವು ಅಂಗನವಾಡಿ ಕೇಂದ್ರಗಳಿಗೆ ಸಿಗುತ್ತಿಲ್ಲವೆಂದು ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಸಿಗುತ್ತಿಲ್ಲ ಹಾಗೂ ಸೂಕ್ತ ಬಾಡಿಗೆ ಕಟ್ಟಡವು ಸಹ ಸಿಗುತ್ತಿಲ್ಲವೆಂದು ಒಂದು ವೇಳೆ ದೊಡ್ಡ ಕಟ್ಟಡವು ದೊರಕಿದರು ತಮ್ಮ ಇಲಾಖೆಯಿಂದ ನಿಗದಿಪಡಿಸದ ರೂ. 3000/-ಕ್ಕಿಂತ ಹೆಚ್ಚಿನ ಬಾಡಿಗೆ ಕೊಡಬೇಕಾಗಿ ಬರುತ್ತದೆಂದು ನಮೂದಿಸಿರುತ್ತಾರೆ.

6) ಇದಲ್ಲದೆ, ರಾಯಚೂರು ನಗರವು ಹೆಚ್ಚಿನ ಕೊಳಚೆ ಪ್ರದೇಶವನ್ನು ಹೊಂದಿದ್ದು ಕೆಲವು ಅಂಗನವಾಡಿ ಕೇಂದ್ರಗಳು ಸಹ ಈ ಪ್ರದೇಶದಲ್ಲಿ ಇರುತ್ತವೆಂದು ನಮೂದಿಸಿರುತ್ತಾರೆ. ಗೌರವಾನ್ವಿತ ಉಪಲೋಕಾಯುಕ್ತರು ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿದ ನಂತರ ಕೆಲವು ಅಂಗನವಾಡಿ ಕೇಂದ್ರಗಳನ್ನು ಸ್ಥಳಾಂತರಿಸಿರುತ್ತೇವೆಂದು ನಮೂದಿಸಿರುತ್ತಾರೆ.

7) 1ನೇ ಎದುರುದಾರರು ಮುಂದುವರೆದು ತಮ್ಮ ಆಕ್ಷೇಪಣೆಯಲ್ಲಿ ತಾವು ರಾಯಚೂರು ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ

ಉಪ ನಿರ್ದೇಶಕರಿದ್ದು, ತಮ್ಮ ವ್ಯಾಪ್ತಿಯಲ್ಲಿ 2662 ಅಂಗನವಾಡಿ ಕೇಂದ್ರಗಳನ್ನು ಮೇಲ್ವಿಚಾರಣೆ ಮಾಡಬೇಕಾಗುತ್ತದೆಂದು ಇದಲ್ಲದೆ ಇಲಾಖೆಯ ಕಾರ್ಯಕ್ರಮಗಳಾದ ಸ್ತ್ರೀ ಶಕ್ತಿ ಯೋಜನೆ , ಭಾಗ್ಯಲಕ್ಷ್ಮೀ ಯೋಜನೆ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಕೌಟುಂಬಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ, ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸ ಬೇಕಾಗುತ್ತದೆಂದು ಆದ್ದರಿಂದ, ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಲು ಸಮಯದ ಕೊರತೆಯಾಗಿರುತ್ತದೆಂದು ತಮ್ಮ ಆಕ್ಷೇಪಣೆಯಲ್ಲಿ ನಮೂದಿಸಿರುತ್ತಾರೆ. ಮುಂದುವರೆದು ಹೇಳುತ್ತಾ ಮಾನ್ಯ ಉಪಲೋಕಾಯುಕ್ತರ ಆದೇಶದ ಮೇರೆಗೆ ತಾನು 12.3.2018 ರಂದು ಈ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿದ್ದೆನೆಂದು ಗೌರವಾನ್ವಿತ ಉಪಲೋಕಾಯುಕ್ತರ ಸೂಚನೆಯಂತೆ ರಾಯಚೂರಿನ ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರು ಕ್ರಮ ಕೈಗೊಂಡಿರುತ್ತಾರೆಂದು, ಇದನ್ನು ತಾವು ಖಚಿತಪಡಿಸಿಕೊಂಡಿರುತ್ತೇವೆಂದು ನಮೂದಿಸಿರುತ್ತಾರೆ.

8) 2ನೇ ಎದುರುದಾರರು ಮುಂದುವರೆದು ಹೇಳುತ್ತಾ, ಗೌರವಾನ್ವಿತ ಉಪಲೋಕಾಯುಕ್ತರ ಭೇಟಿ ನಂತರ ಕೆಲವು ಅಂಗನವಾಡಿ ಕಟ್ಟಡಗಳನ್ನು ಬದಲಾಯಿಸಲು ತಿಳಿಸಿದ್ದರಿಂದ, ತಾವು ಪ್ರಯತ್ನ ಮಾಡಿ ಸದರಿ ಬಾಡಿಗೆ ಕಟ್ಟಡಗಳನ್ನು ಬದಲಾಯಿಸಿರುತ್ತೇನೆಂದು ಹಾಗೂ ಉತ್ತಮವಾದ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸುವಂತೆ ಕೇಂದ್ರದಲ್ಲಿನ ವಾತಾವರಣ ಹಾಗೂ ಸುತ್ತಲಿನ ವಾತಾವರಣ ಶುಚಿಯಾಗಿರುವಂತೆ ನೋಡಿಕೊಳ್ಳಲು ಎಲ್ಲಾ ಮೇಲ್ವಿಚಾರಕರಿಗೆ ಹಾಗೂ ಅಂಗನವಾಡಿ ಕಾರ್ಯಕರ್ತೆಯರಿಗೆ ತಿಳಿಸಿರುತ್ತೇನೆಂದು ಹಾಗೂ ತಮ್ಮ ವ್ಯಾಪ್ತಿಯಲ್ಲಿ ಬರುವ 275 ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡುತ್ತಿದ್ದೇನೆಂದು

ನಮೂದಿಸಿರುತ್ತಾರೆ. ಹಾಗೂ ನಗರಸಭೆ ಸದಸ್ಯರಿಗೆ ಎಲ್.ಬಿ.ಎಸ್. ನಗರದ ಅಂಗನವಾಡಿ ಕೇಂದ್ರದ ಸುತ್ತಮುತ್ತ ಪರಿಸರವನ್ನು ಸ್ವಚ್ಛವಾಗಿಡಲು ವಿನಂತಿಸಿರುತ್ತೇನೆಂದು ನಮೂದಿಸಿರುತ್ತಾರೆ.

9) ಎದುರುದಾರರು ಮುಂದುವರೆದು ಹೇಳುತ್ತಾ, ಗೌರವಾನ್ವಿತ ಉಪಲೋಕಾಯುಕ್ತರ ಭೇಟಿಯ ಸಮಯದಲ್ಲಿ ಸೂಚಿಸಿದ ಎಲ್ಲಾ ಅಂಶಗಳನ್ನು ಪಾಲಿಸುತ್ತೇನೆಂದು ಹಾಗೂ ಉತ್ತಮವಾಗಿ ಅಂಗನವಾಡಿ ಕೇಂದ್ರ ನಡೆಯಲು ಕ್ರಮವಹಿಸುತ್ತೇನೆಂದು ತಮ್ಮ ತಪ್ಪನ್ನು ಕ್ಷಮಿಸಬೇಕೆಂದು ಕೋರಿರುತ್ತಾರೆ.

10) 3ನೇ ಎದುರುದಾರರು- ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಕರು ಇದ್ದು, ತಮ್ಮ ಆಕ್ಷೇಪಣೆಯಲ್ಲಿ ಮುಂದುವರೆದು ಹೇಳುತ್ತಾ, ಗೌರವಾನ್ವಿತ ಉಪಲೋಕಾಯುಕ್ತರು ಭೇಟಿ ಮಾಡಿ ಅಂಗನವಾಡಿ ಕಟ್ಟಡಗಳನ್ನು ಬದಲಾಯಿಸಲು ತಿಳಿಸಿದ್ದರಿಂದ ಸಾಕಷ್ಟು ಪ್ರಯತ್ನ ಮಾಡಿ ಬಾಡಿಗೆ ಕಟ್ಟಡಗಳನ್ನು ಬದಲಾಯಿಸಲಾಗಿದೆ ಎಂದು ನಮೂದಿಸಿರುತ್ತಾರೆ. ಹಾಗೂ ತಮ್ಮ ವಲಯದಲ್ಲಿ 41 ಅಂಗನವಾಡಿ ಕೇಂದ್ರಗಳಿಗೆ ಭೇಟಿ ಮಾಡುತ್ತಿದ್ದೆನೆಂದು ಹಾಗೂ ಉತ್ತಮ ಕಟ್ಟಡಗಳಲ್ಲಿ ಅಂಗನವಾಡಿ ಕೇಂದ್ರಗಳು ನಡೆಯುವಂತೆ ಹಾಗೂ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವಂತೆ ಅಂಗನವಾಡಿ ಕಾರ್ಯಕರ್ತರಿಗೆ ತಿಳಿಸಿರುತ್ತೇನೆಂದು ನಮೂದಿಸಿರುತ್ತಾರೆ.

11) 3ನೇ ಎದುರುದಾರರು ಮುಂದುವರೆದು ಹೇಳುತ್ತಾ, ಮಾನ್ಯ ಉಪಲೋಕಾಯುಕ್ತರು ಸೂಚಿಸಿದ ಎಲ್ಲಾ ಅಂಶಗಳನ್ನು ತಾವು ಪಾಲಿಸುತ್ತೇವೆಂದು ಹಾಗೂ ಈ ಅಂಗನವಾಡಿ ಕೇಂದ್ರಗಳು ಉತ್ತಮವಾಗಿ ನಡೆಯಲು ಸೂಚಿಸಿದ ಎಲ್ಲಾ ಅಂಶಗಳನ್ನು ಪಾಲಿಸುತ್ತೇನೆಂದು ಹಾಗೂ

ಉತ್ತಮವಾಗಿ ಅಂಗನವಾಡಿ ಕೇಂದ್ರ ನಡೆಯಲು ಕ್ರಮವಹಿಸುತ್ತೇನೆಂದು ತಮ್ಮ ಹಿಂದಿನ ತಪ್ಪನ್ನು ಕ್ಷಮಿಸಬೇಕೆಂದು ಕೋರಿರುತ್ತಾರೆ.

12) ಗೌರವಾನ್ವಿತ ಉಪಲೋಕಾಯುಕ್ತರು ದಿ: 31.1.2018 ರಂದು ರಾಯಚೂರು ನಗರಕ್ಕೆ ಭೇಟಿ ನೀಡಿ ಕೆಲವು ಅಂಗನವಾಡಿ ಕೇಂದ್ರಗಳನ್ನು ಪರಿಶೀಲಿಸಿದಾಗ ಮೇಲೆ ನಮೂದಿಸಿರುವ 6 ಅಂಗನವಾಡಿ ಕೇಂದ್ರಗಳಲ್ಲಿ ಕಂಡುಬಂದ ನ್ಯೂನತೆಗಳು ಮತ್ತು ನಿರ್ವಹಣೆ ಮಾಡುವಲ್ಲಿ ಇರುವ ಲೋಪದೋಷವನ್ನು ಹಾಗೂ ಈ ಅಂಗನವಾಡಿ ಕೇಂದ್ರಗಳ ಮೇಲ್ವಿಚಾರಣೆ ಮಾಡದೇ ಇರುವುದನ್ನು ಗಮನಿಸಿ ಆಕ್ಷೇಪಿಸಿರುತ್ತಾರೆ. ಅವುಗಳಲ್ಲಿ ಈ ಅಂಗನವಾಡಿ ಕೇಂದ್ರಗಳು:

(ಎ) ಶುಚಿತ್ವದಿಂದ ಕೂಡಿರುವುದಿಲ್ಲವೆಂದು; ಇದರಿಂದಾಗಿ ಮಕ್ಕಳ ಮತ್ತು ಗರ್ಭಿಣಿಯರ ಆರೋಗ್ಯದ ಮೇಲೆ ನೇರ ಪರಿಣಾಮ ಬೀರುತ್ತದೆಂದು, ಗೌರವಾನ್ವಿತರು ನಮೂದಿಸಿರುತ್ತಾರೆ. ಇದಲ್ಲದೇ, ಹೆಚ್ಚಿನ ಅಂಗನವಾಡಿ ಕೇಂದ್ರಗಳೂ ಚಿಕ್ಕ ಕಟ್ಟಡಗಳಲ್ಲಿ ನಡೆಯುತ್ತಿದ್ದು ಗಾಳಿ ಬೆಳಕಿಲ್ಲದೆ ಇರುವುದು, ಶುಚಿತ್ವವಿಲ್ಲದೇ ಇರುವುದು ಇವುಗಳೆಲ್ಲವೂ ಮಕ್ಕಳ ಮತ್ತು ಗರ್ಭಿಣಿಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುವುದಲ್ಲದೇ, ಈ ಯೋಜನೆಯ ಉದ್ದೇಶವೇ ನಿಷ್ಫಲವಾಗುತ್ತದೆ.

(ಬಿ) ಮಕ್ಕಳ ಹಾಜರಾತಿ ವಹಿ ಮತ್ತು ಗರ್ಭಿಣಿಯರ ಹಾಜರಾತಿ ಹಾಗೂ ಗರ್ಭಿಣಿಯರ ಆರೋಗ್ಯ ತಪಾಸಣೆಯ ವಹಿಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದು ಸಹ ಕಂಡುಬರುತ್ತದೆ .

(ಸಿ) ಗರ್ಭಿಣಿಯರ ಹಾಜರಾತಿ ಪುಸ್ತಕದಲ್ಲಿರುವ ಸಹಿಗಳನ್ನು ಒಂದೇ ದಿನ ಪಡೆದುಕೊಂಡಿರುವಂತೆ ಕಂಡುಬರುತ್ತಿದ್ದು ಇವುಗಳನ್ನು ಎದುರುದಾರರು ಪರಿಶೀಲಿಸಿರುವುದಿಲ್ಲ.

(ಡಿ) ಇದಲ್ಲದೇ 1 ಮತ್ತು 2ನೇ ಎದುರುದಾರರು, 3ನೇ ಎದುರುದಾರರನ್ನು ಒಳಗೊಂಡು ಈ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಿ ಅದರ ಸರಿಯಾದ ನಿರ್ವಹಣೆ ಬಗ್ಗೆ ಗಮನಹರಿಸಿರುವುದು ಕಂಡುಬರುವುದಿಲ್ಲ. ಗೌರವಾನ್ವಿತ ಉಪಲೋಕಾಯುಕ್ತರು ಭೇಟಿ ನೀಡಿದ ಈ 6 ಕೇಂದ್ರಗಳು ಶುಚಿಯಾಗಿರಲಿಲ್ಲ ಎನ್ನುವುದನ್ನು ಹಾಗೂ ಮಕ್ಕಳ

ಹಾಜರಾತಿ ವಹಿ ಮತ್ತು ಗರ್ಭಿಣಿಯರ ಹಾಜರಾತಿ ಹಾಗೂ ಆಹಾರ ದಾಸ್ತಾನು ವಹಿಗಳನ್ನು ಸರಿಯಾಗಿ ನಿರ್ವಹಣೆ ಮಾಡದೇ ಇರುವುದು ಎದುರುದಾರರುಗಳು ಈ ಕೇಂದ್ರಗಳಿಗೆ ಭೇಟಿ ನೀಡಿ ಕ್ರಮಬದ್ಧವಾಗಿ ತಪಾಸಣೆ ಮಾಡದೇ ಹಾಗೂ ಕ್ರಮತೆಗೆದುಕೊಳ್ಳದೇ ಇರುವುದು ಕಂಡುಬರುತ್ತದೆ. ಈ ಅಂಗನವಾಡಿ ಕೇಂದ್ರಗಳ ಸ್ವಚ್ಛತೆ ಬಗ್ಗೆ, ವಹಿಗಳ ನಿರ್ವಹಣೆ ಬಗ್ಗೆ ಈ ಎದುರುದಾರರುಗಳು ಗಮನಹರಿಸಿಲ್ಲದೇ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆಗಾಗ್ಗೆ ಈ ಅಂಗನವಾಡಿ ಕೇಂದ್ರಗಳಿಗೆ ಎದುರುದಾರರು ಭೇಟಿ ನೀಡಿ ಮೇಲ್ವಿಚಾರಣೆ ಮಾಡಿದ್ದರೆ ಈ ರೀತಿಯ ತೀವ್ರತರವಾದ ಲೋಪಗಳು ಕಂಡುಬರುತ್ತಿರಲಿಲ್ಲ. ಗೌರವಾನ್ವಿತ ಉಪಲೋಕಾಯುಕ್ತರು ಗಮನಿಸಿ ಆಕ್ಷೇಪಿಸಿರುವ ತೀವ್ರತರವಾದ ಲೋಪಗಳನ್ನು ಈ ಎದುರುದಾರರುಗಳು ಅಲ್ಲಗೆಳೆದಿರುವುದಿಲ್ಲ.

13. ಈ ಎಲ್ಲಾ ಅಂಶಗಳಿಂದ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಕರ್ತವ್ಯ ಲೋಪವೆಸಗಿ ಸರ್ಕಾರಿ ನೌಕರರಿಗೆ/ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಕರ್ನಾಟಕ ನಾಗರೀಕ ಸೇವೆ (ಸಿ.ಸಿ.ಎ) ನಿಯಮ 1966 ರ ನಿಯಮ 3(1), (i) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಎದುರುದಾರರಾದ 1. ಶ್ರೀ ನಾಗರಾಜ, ಉಪನಿರ್ದೇಶಕರು ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ, ರಾಯಚೂರು ಜಿಲ್ಲೆ, 2. ಶ್ರೀ ವೀರಣ್ಣಗೌಡ, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಯಚೂರು ತಾಲ್ಲೂಕು ಮತ್ತು 3. ಶ್ರೀಮತಿ ಭಾರತಿಬಾಯಿ, ಅಂಗನವಾಡಿ ಮೇಲ್ವಿಚಾರಕರು, ಮಡ್ಡಿಪೇಟೆ ವಲಯ, ರಾಯಚೂರು ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, ಎದುರುದಾರರ ವಿರುದ್ಧ ವಿಚಾರಣೆ ನಡೆಸಲು, ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.